**<u>ನಾಲ್ಕನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ</u>**

**<u>ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ</u>**

**ದಿನಾಂಕಃ 14 ನೇ ಆಗಸ್ಟ್ 2023**

**ಃಉಪಸ್ಥಿತಿಃ**

**ಶ್ರೀ.ರಮೇಶ ದುರುಗಪ್ಪ ಏಕಬೋಟೆ,**

ಬಿ.ಎಸ್.ಸಿ., ಎಂ.ಎ., ಎಲ್‌ಎಲ್.ಬಿ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

**<u>ಕ್ರಿಮಿನಲ್ ಮಿಸ್ ಸಂಖ್ಯೆ ಃ 10136 /2023</u>**

**ಅರ್ಜಿದಾರರುಃ**

**1) ಶ್ರೀ. ನಂದಕುಮಾರ್ .ವಿ**
ತಂದೆಃ ಮೃತ ವೆಂಕಟೇಶ್, ವಯಸ್ಸುಃ 21 ವರ್ಷ
ವಾಸಃ ನಂ.515, 12 ನೇ ಕ್ರಾಸ್
ಯಡಿಯೂರಪ್ಪ ನಗರ, ಸಿಂಗನಾಯಕನಹಳ್ಳಿ ಪೋಸ್ಟ್
ಯಲಹಂಕ ಹೋಬಳಿ ಮತ್ತು ತಾಲ್ಲೂಕು
ಬೆಂಗಳೂರು

**2) ಶ್ರೀ. ಪ್ರಶಾಂತ್ .ಆರ್.ಪಿ.**
ತಂದೆಃ ಎ.ಆರ್. ಪ್ರಕಾಶ್ ಕುಮಾರ್, ವಯಸ್ಸುಃ 20 ವರ್ಷ
ವಾಸಃ ನಂ.351, ರಾಜಾನುಕುಂಟೆ
ಯಲಹಂಕ ಹೋಬಳಿ, ಬೆಂಗಳೂರು – 64

**3) ಶ್ರೀ. ಅಕ್ಷಯ್ ಗೌಡ .ಎಸ್**
ತಂದೆಃ ಸುರೇಶ್ .ಹೆಚ್, ವಯಸ್ಸುಃ 22 ವರ್ಷ
ವಾಸಃ ರಾಮಗೊಂಡನಹಳ್ಳಿ
ಸಿಂಗನಾಯಕನಹಳ್ಳಿ ಪೋಸ್ಟ್
ಯಲಹಂಕ ಹೋಬಳಿ ಮತ್ತು ತಾಲ್ಲೂಕು
ಬೆಂಗಳೂರು – 64

**(2 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ ಹೆಚ್.ವಿ.ಎಸ್., ವಕೀಲರು)**

**ವಿರುದ್ಧ**

**ಎದುರುದಾರರು:** ರಾಜ್ಯದ ಪರವಾಗಿ
**ರಾಜಾನುಕುಂಟೆ ಪೋಲೀಸು ಠಾಣೆ**

**(ಫಿರ್ಯಾದುದಾರರ ಪರವಾಗಿ ಮಾನ್ಯ ಸರ್ಕಾರಿ ಅಭಿಯೋಜಕರು)**

**<u>ಆ ದೇ ಶ</u>**

ಸದರಿ ಅರ್ಜಿದಾರರು/ 2 ರಿಂದ 4 ನೇ ಆರೋಪಿತರ ಪರವಾಗಿ ದಂಡಪ್ರಕ್ರಿಯಾ ಸಂಹಿತೆ ಕಲಂ 439 ರಡಿ ಸದರಿ ಅರ್ಜಿಯನ್ನು ಸಲ್ಲಿಸಿ ಎದುರುದಾರರು ಭಾರತೀಯ ದಂಡ ಸಂಹಿತೆ ಕಲಂ.364(ಎ) ರ ಶಿಕ್ಷಾರ್ಹ ಅಪರಾಧಕ್ಕಾಗಿ ದಾಖಲಿಸಿದ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 2 ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಜಾರಿಯಲ್ಲಿರುವ ಸಿ.ಸಿ.ನಂ.8624/2023 ರಲ್ಲಿ ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2.** ಸದರಿ ಆರೋಪಿ/ ಅರ್ಜಿದಾರರು ತಮ್ಮ ಅರ್ಜಿಯಲ್ಲಿ, ಅಪರಿಚಿತ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.364-ಎ ರ ಶಿಕ್ಷಾರ್ಹ ಅಪರಾಧಕ್ಕಾಗಿ ಅಮೃತಹಳ್ಳಿ ಪೋಲೀಸ್‌ಠಾಣಾ

ಮೊಕದ್ದಮೆ ಸಂಖ್ಯೆಃ 158/2023 ರಡಿ ದಾಖಲಿಸಿದ ಪ್ರಕರಣವು ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ರಾಜಾನುಕುಂಟೆ ಪೋಲೀಸ್‌ಠಾಣೆಗೆ ಕಡತವನ್ನು ವರ್ಗಾಯಿಸಿದ್ದರಿಂದ ಸದರಿ ಠಾಣಾಧಿಕಾರಿಯು ಕಡತವನ್ನು ಪಡೆದುಕೊಂಡು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯ ಸಮಯದಲ್ಲಿ ಸದರಿ 1, 3 ಮತ್ತು 4 ನೇ ಆರೋಪಿತರನ್ನು ದಿನಾಂಕಃ 29-06-2023 ರಂದು ದಸ್ತಗಿರಿಪಡಿಸಿ ವಿಚಾರಿಸಿದಾಗ ಸದರಿ ಆರೋಪಿತರು 2 ನೇ ಆರೋಪಿತರೊಂದಿಗೆ ಕೃತ್ಯವನ್ನು ಎಸಗಿರುತ್ತಾರೆಂಬುದು ಕಂಡು ಬಂದಿದ್ದರಿಂದ 1, 3 ಮತ್ತು 4 ನೇ ಆರೋಪಿತರನ್ನು ದಸ್ತಗಿರಿಪಡಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಅದೇಶಿಸಲಾಗಿರುತ್ತದೆಂದು ಮತ್ತು ತನಿಖಾಧಿಕಾರಿಗಳು ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಪತ್ರವನ್ನು ಸಲ್ಲಿಸಿರುತ್ತಾರೆಂದು,

**3.** ಆದರೆ ಸದರಿ ಅಮೃತಹಳ್ಳಿ ಪೋಲೀಸರು ಪಿರ್ಯಾದಿದಾರರಾದ ಶ್ರೀರಾಮ ತಂದೆ ರಾಮನಿವಾಸ್ ಇವರು ತಮ್ಮ ದೂರಿನಲ್ಲಿ ತಾನು ಹೆಬ್ಬಾಳದ ಕೆಂಪಾಪುರದ ಮಾರುತಿ ಬಡಾವಣೆಯಲ್ಲಿ ವಾಸವಾಗಿದ್ದು, ಜೀವನಕ್ಕಾಗಿ ಸ್ಟೀಲ್ ಫ್ಯಾಬ್ರಿಕೇಷನ್‌ನಲ್ಲಿ ಕೆಲಸ ಮಾಡುತ್ತಿದ್ದು, ಸದರಿ ಪಿರ್ಯಾದಿದಾರರ ಸ್ನೇಹಿತರಾದ ಸುರೇಶ್‌ರವರು ಸೊಣ್ಣಪ್ಪ ಬಡಾವಣೆಯಲ್ಲಿ ವಾಸವಾಗಿರುತ್ತಾರೆಂದು,

**4.** ಸದರಿ ಸುರೇಶನು ದಿನಾಂಕಃ 19-06-2023 ರಂದು ಬೆಳಗಿನ ಜಾವ ಕಾಣೆಯಾಗಿದ್ದು, ಆದರೆ ದಿನಾಂಕಃ 19-06-2023 ರ ರಾತ್ರಿ ಸುಮಾರು 09-28 ಗಂಟೆಯಲ್ಲಿ ರಾಜಸ್ಥಾನದಲ್ಲಿರುವ ಸುರೇಶ್‌ರವರ ತಂದೆಯವರಿಗೆ ಯಾವುದೋ ಅಪರಿಚಿತರು ಫೋನ್ ಮಾಡಿ ನಿಮ್ಮ ಮಗನಾದ

ಸುರೇಶ್‌ನನ್ನು ಅಪಹರಣ ಮಾಡಿದ್ದು ಮಗ ಬೇಕಾಗಿದ್ದಲ್ಲಿ ರೂ. ಒಂದು ಲಕ್ಷ ರೂಪಾಯಿಗಳನ್ನು ನೀಡಿದರೆ ಅವರ ಮಗನನ್ನು ಬಿಡುವುದಾಗಿ ಹೇಳಿರುತ್ತಾರೆಂದು,

**5.** ಆ ನಂತರ ಸದರಿ ಸುರೇಶ್‌ನ ತಂದೆಯವರು ಫೋನ್ ಪೇ ಮೂಲಕ ರೂ.1,00,000-00 ಗಳನ್ನು ಪಾವತಿಸಿರುತ್ತಾರೆಂದು ನಂತರವೂ ಸಹ ಸದರಿ ಅಪರಿಚಿತ ವ್ಯಕ್ತಿಗಳು ಸುರೇಶ್‌ನ ತಂದೆಗೆ ಕರೆ ಮಾಡಿ ಪುನಃ ರೂ.50,000-00 ಗಳನ್ನು ನೀಡುವಂತೆ ಒತ್ತಾಯಿಸಿದ್ದು, ಆಗ ಸದರಿ ಸುರೇಶ್‌ನ ತಂದೆಯವರು ರೂ.50,000-00 ಗಳನ್ನು ನೀಡಲು ನಿರಾಕರಿಸಿ ಆತನ ಸ್ನೇಹಿತನಾದ ಪಿರ್ಯಾದಿದಾರರಿಗೆ ಕರೆ ಮಾಡಿ ತನ್ನ ಮಗ ಕಳೆದುಹೋಗಿರುವುದನ್ನು ತಿಳಿಸಿದ ಮೇರೆಗೆ ಪಿರ್ಯಾ ದಿದಾರರು ಪೋಲೀಸ್‌ಠಾಣೆಗೆ ಹಾಜರಾಗಿ ನೀಡಿರುವ ದೂರಿನ ಮೇರೆಗೆ ಸದರಿ ಪೋಲೀಸರು ಅಪರಿಚಿತರ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ತನಿಖೆಯ ಸಮಯದಲ್ಲಿ ಸದರಿ ಅಪರಿಚಿತರು ಸದರಿ ಸುರೇಶ್‌ನನ್ನು ಅಪಹರಣ ಮಾಡಿದ ಸ್ಥಳವು ರಾಜಾನುಕುಂಟೆ ಪೋಲೀಸ್‌ಠಾಣಾ ವ್ಯಾಪ್ತಿಗೆ ಬರುವುದರಿಂದ ಅ ಪ್ರಕಾರವಾಗಿ ರಾಜಾನುಕುಂಟೆ ಪೋಲೀಸರು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಪತ್ರವನ್ನು ಸಲ್ಲಿಸಿರುತ್ತಾರೆಂದು,

**6.** ಅದರೆ ಆರೋಪಿತರು / ಅರ್ಜಿದಾರರು ಮುಗ್ದರಾಗಿದ್ದು ಅಂತಹ ಯಾವುದೇ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದಿಲ್ಲವೆಂದು ಮತ್ತು ಸದರಿ ಕೃತ್ಯಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿರುವುದಿಲ್ಲವೆಂದು, ಅಲ್ಲದೇ ಸರಿಯಾಗಿ ತನಿಖೆ ಮಾಡದೇ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆಂದು,

**7.** ಅಲ್ಲದೇ ಸದರಿ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವಿರುವುದಿಲ್ಲವೆಂದು ಮತ್ತು ಯಾವುದೇ ಸ್ವತ್ತನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲವೆಂದು, ಅಲ್ಲದೇ ಸುರೇಶನು 1 ನೇ ಆರೋಪಿ ಸುದೀಪನಿಂದ ರೂ.5,000-00 ಗಳನ್ನು ಸಾಲವಾಗಿ ಪಡೆದುಕೊಂಡು ಪಾವತಿಸದೇ ಇದ್ದುದ್ದರಿಂದ ಮರುಪಾವತಿಸುವಂತೆ ಕೋರಿದ್ದರೂ ಸಹ ನಿಗದಿತ ಸಮಯದಲ್ಲಿ ಪಾವತಿಸಿರುವು ದಿಲ್ಲವೆಂದು ತಿಳಿಸಿದ್ದು ಸದರಿ ಅಂಶಗಳ ಮೂಲಕ 1 ನೇ ಆರೋಪಿ ಮತ್ತು ಸುರೇಶನ ನಡುವೆ ಹಣದ ವ್ಯವಹಾರ ನಡೆದಿರುತ್ತದೆಂಬುದು ಕಂಡುಬರುತ್ತದೆ. ಆದರೆ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆಂದು,

**8.** ಆದರೆ ಸುರೇಶನು 2019 ರಲ್ಲಿ ರೂ.50,000-00 ಗಳನ್ನು ಸಾಲವಾಗಿ ಪಡೆದುಕೊಂಡು ಅನೇಕ ಬಾರಿ ಕೇಳಿದ್ದರೂ ಸಹ ವಾಪಸ್ಸು ನೀಡದೇ ತಲೆಮರೆಸಿಕೊಂಡಿರುತ್ತಾನೆಂದು, ಇತ್ತೀಚೆಗೆ ಪತ್ತೆ ಮಾಡಿ ಮಾತುಕತೆ ನಡೆಸಿದ ನಂತರ ರೂ.50,000-00 ಗಳಿಗೆ ರೂ.1,50,000-00 ಗಳನ್ನು ನೀಡುತ್ತೇನೆಂದು ಒಪ್ಪಿಕೊಂಡು ರೂ.10,000-00 ಗಳನ್ನು ನೀಡಿರುತ್ತಾರೆಂದು,

**9.** ಅಲ್ಲದೇ ತನ್ನ ತಂದೆಯ ಕಡೆಯಿಂದ ಹಣ ಕೇಳುವ ಉದ್ದೇಶದಿಂದ ತನ್ನನ್ನ ಅಪಹರಿಸಿರುತ್ತಾರೆಂದು ತಿಳಿಸಿದ್ದು ಆದರೆ ಸುರೇಶನ ತಂದೆಯು ನಂಬದೇ ಇದ್ದುದ್ದರಿಂದ ತನ್ನ ಸ್ನೇಹಿತ ಶ್ರೀರಾಮನ ಮೂಲಕ ದೂರು ದಾಖಲಿಸಿರುತ್ತಾರೆಂದು, ಅಲ್ಲದೇ ಅರ್ಜಿದಾರರೆಲ್ಲರೂ ಸಹ ವಿದ್ಯಾರ್ಥಿಗಳಾಗಿದ್ದು ನಿಟ್ಟೆ ಕಾಲೇಜಿನಲ್ಲಿ ಓದುತ್ತಿದ್ದು ಅವರ ವಿರುದ್ಧ ಯೊವುದೇ ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುವುದಿಲ್ಲವೆಂದು,

**10.** ಅಲ್ಲದೇ ಅರ್ಜಿದಾರರು ಅರ್ಜಿಯಲ್ಲಿ ತಿಳಿಸಿದ ವಿಳಾಸದಲ್ಲಿ ಖಾಯಂ ನಿವಾಸಿಗಳಾಗಿದ್ದು ಗೌರವಯುತ ಕುಟುಂಬದಿಂದ ಬಂದಿರುತ್ತಾರೆಂದು ನ್ಯಾಯಾಲಯವು ವಿಧಿಸುವ ಷರತ್ತುಗಳನ್ನು ಪೂರೈಸಲು ಸಿದ್ಧರಿರುತ್ತಾರೆಂದು, ಆದ್ದರಿಂದ ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

**11.** ಸದರಿ ಅರ್ಜಿಯು ಜಾರಿಯಾದ ನಂತರ ಸರ್ಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ತಮ್ಮ ತಕರಾರಿನಲ್ಲಿ ಪಿರ್ಯಾದಿನ ಅಂಶಗಳನ್ನು ಪುನರುಚ್ಚರಿಸಿ, ಆರೋಪಿತರ ವಿರುದ್ಧ ತನಿಖೆಯನ್ನು ಪೂರ್ಣಗೊಳಿಸಿ ಈಗಾಗಲೇ ದೋಷಾರೋಪಣಪತ್ರವನ್ನು ಸಲ್ಲಿಸಿದ್ದು, ಆರೋಪಿತರಿಂದ ಮೂರು ಮೊಬೈಲ್ ಫೋನ್‌ಗಳನ್ನು ಅಮಾನತ್ತುಪಡಿಸಿಕೊಂಡು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಸ್ಥಳ ಮಹಜರು ಜರುಗಿಸಿ ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆ ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿದ್ದು ಒಂದು ವೇಳೆ ಆರೋಪಿ / ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಟ್ಟಲ್ಲಿ ಸಾಕ್ಷ್ಯವನ್ನು ನಾಶಪಡಿಸುವ ಮತ್ತು ಭಯ ಭೀತಿ ಇಲ್ಲದೇ ಪುನಃ ಇದೇ ತರಹದ ಅಪರಾಧಗಳನ್ನು ಮಾಡುವ ಮತ್ತು ಆರೋಪಿತರು ತಲೆಮರೆಸಿಕೊಳ್ಳುವ ಮತ್ತು ಪರಾರಿ ಆಗುವ ಸಾಧ್ಯತೆ ಇರುತ್ತದೆಂದು ಮತ್ತು ವಿಚಾರಣೆಗೆ ಸಹಕರಿಸದೇ ಇರುವ ಮತ್ತು ಪಿರ್ಯಾದಿದಾರರನ್ನು ಮತ್ತು ಸಾಕ್ಷಿದಾರರನ್ನು ಹೆದರಿಸುವ ಮತ್ತು ಬೆದರಿಸುವ ಸಾಧ್ಯತೆ ಇರುತ್ತದೆಂದು ಮತ್ತು ವಿಚಾರಣೆಯ ಸಮಯದಲ್ಲಿ ಸಾಕ್ಷಿದಾರರಿಗೆ ಸಾಕ್ಷ್ಯ ನುಡಿಯದಂತೆ ತಡೆಯುವ ಸಾಧ್ಯತೆಯಿರುತ್ತದೆಂದು, ಆದ್ದರಿಂದ ಸದರಿ ಆರೋಪಿತರು ಸಲ್ಲಿಸಿದ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

**12.** ಉಭಯ ವಕೀಲರ ವಾದ ಆಲಿಸಲಾಯಿತು. ಅರ್ಜಿದಾರರ ವಕೀಲರು ತಮ್ಮ ವಾದ ಮಂಡನೆಯ ಸಮರ್ಥನೆಗಾಗಿ ಎಐಆರ್ 1984 ಎಸ್.ಸಿ. 372 - ಭಗೀರಥ್‌ಸಿಂಗ್ ಜುಡೇಜಾ ವಿರುದ್ಧ ಗುಜರಾತ್ ಸರ್ಕಾರ, 2012 ಕ್ರೈಂ 702 - ಸಂಜಯ್ ಚಂದ್ರ ವಿರುದ್ಧ ಸಿ.ಬಿ.ಐ. ರಲ್ಲಿ ನೀಡಿದ ತೀರ್ಪಿನ ವರದಿಗಳನ್ನು ಹಾಜರುಪಡಿಸಿರುತ್ತಾರೆ.

**13.** ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

**14.** ಈ ಕೆಳಕಂಡ ಅಂಶಗಳು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತವೆ.

**ಅಂಶ 1 : ಸದರಿ 2 ರಿಂದ 4 ನೇ ಆರೋಪಿತರು / ಅರ್ಜಿದಾರರು ದಂಡಪ್ರಕ್ರಿಯಾ ಸಂಹಿತೆ ಕಲಂ 439 ರಡಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ಪುರಸ್ಕರಿಸಲು ಮತ್ತು ಜಾಮೀನಿನ ಮೇಲೆ ಬಿಡುಗಡೆಗೊಳಿಲು ಸಮರ್ಥನೀಯವಾದ ಕಾರಣಗಳನ್ನು ನೀಡಿರುತ್ತಾರೆಯೇ?**

**ಅಂಶ 2 : ಆದೇಶವೇನು?**

**15.** ಉಭಯ ವಕೀಲರ ವಾದ ವಿವಾದವನ್ನು ಆಲಿಸಿ ಮತ್ತು ಜಾಮೀನು ಅರ್ಜಿಯ ಮತ್ತು ತಕರಾರಿನ ಅಂಶಗಳನ್ನು ಹಾಗೂ ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಮತ್ತು ತೀರ್ಪಿನ ವರದಿಗಳನ್ನು ಪರಿಶೀಲಿಸಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರ.

**ಅಂಶ 1:- ನಕರಾತ್ಮಕವಾಗಿ,**

**ಅಂಶ 2:- ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ,**

## ಕಾರಣಗಳು

16. **ಅಂಶ 1ಃ-** ಸದರಿ ಆರೋಪಿತರು/ಅರ್ಜಿದಾರರ ಪರವಾಗಿ ವಕೀಲರು ವಾದ ಮಂಡಿಸಿ ಅಪಹರಣ ಮಾಡಿರುತ್ತಾರೆಂದು ಹೇಳುವ ಸುರೇಶನು ಡ್ರಗ್ ಅಡಿಕ್ಟ್‌ನಾಗಿದ್ದು ಡಗ್ಸ್ ಮಾರಾಟ ಮಾಡುತ್ತಿದ್ದು ಸದರಿ ವಿಚಾರವನ್ನು ಅರ್ಜಿದಾರರು ಪ್ರಶ್ನಿಸಿದ್ದರಿಂದ ಅವರ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆಂದು,

17. ಅಲ್ಲದೇ ಯಾವುದೇ ಮಾರಣಾಂತಿಕ ಅಥವಾ ತೀವ್ರ ಸ್ವರೂಪದ ಗಾಯಗಳಾಗಿರುವು ದಿಲ್ಲವೆಂದು, ಅಲ್ಲದೇ ಈಗಾಗಲೇ ಚಿಕಿತ್ಸೆಯನ್ನು ಪಡೆದುಕೊಂಡು ಗುಣಮುಖರಾಗಿರುತ್ತಾರೆಂದು, ಅಲ್ಲದೇ ಸದರಿ ಸುರೇಶನು ಡ್ರಗ್ಸ್ ಮಾರಾಟ ಮಾಡುತ್ತಿದ್ದಾನೆದು ತಿಳಿಸಿದ್ದು ಆದರೆ ಆ ಬಗ್ಗೆ ವಿಚಾರಣೆ ಮಾಡಿರುವುದಿಲ್ಲವೆಂದು, ಅಲ್ಲದೇ ಆರೋಪಿತರ ವಿರುದ್ಧ ಹಣ ಸುಲಿಗೆ ಮಾಡುವ ಉದ್ದೇಶದಿಂದ ಅಪಹರಣ ಮಾಡಿರುತ್ತಾರೆಂಬ ಬಗ್ಗೆ ಯಾವುದೇ ಸಾಕ್ಷ್ಯವಿರುವುದಿಲ್ಲವೆಂದು,

18. ಅಲ್ಲದೇ ಸದರಿ ಸುರೇಶನಿಗೆ ಯಾವುದೇ ತೀವ್ರ ಸ್ವರೂಪದ ಗಾಯಗಳಾಗಿರುವುದಿಲ್ಲವೆಂದು, ಕಲಂ.324 ಅಥವಾ 326 ರ ಶಿಕ್ಷಾರ್ಹ ಅಪರಾಧವು ಅನ್ವಯಿಸುತ್ತದೆಯೇ ವಿನಃ ಸಕಲಂ.364(ಎ) ಅನ್ವಯಿಸುವುದಿಲ್ಲವೆಂದು ಆದ್ದರಿಂದ ಆರೋಪಿತರು ಯಾವುದೇ ಕೃತ್ಯವನ್ನು ಮಾಡಿರುವುದಿಲ್ಲವೆಂದು,

19. ಅಲ್ಲದೇ ಆರೋಪಿತರು ನಿಟ್ಟೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದು, ಕೇವಲ 20 ರಿಂದ 22 ವರ್ಷದ ಪ್ರಾಯಸ್ಥರಾಗಿದ್ದು ಸದರಿಯವರನ್ನು ನ್ಯಾಯಾಂಗ ಬಂಧನದಲ್ಲಿ ಮುಂದುವರೆಸಿದ್ದಲ್ಲಿ ಅವರ ವಿದ್ಯಾರ್ಥಿ ಜೀವನಕ್ಕೆ ಮತ್ತು ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಸಾಧ್ಯತೆಯಿರುತ್ತದೆಂದು, ಅಲ್ಲದೇ

ಆರೋಪಿತರಿಂದ ಯಾವುದೇ ಸ್ವತ್ತನ್ನು ಮತ್ತು ಹಣವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲವೆಂದು ಮತ್ತು ತನಿಖೆಯನ್ನು ಪೂರ್ಣಗೊಳಿಸಿ ಈಗಾಗಲೇ ದೋಷಾರೋಪಣಪತ್ರವನ್ನು ಸಲ್ಲಿಸಿರುವುದರಿಂದ ತನಿಖೆಗೆ ಆರೋಪಿತರ ಅವಶ್ಯಕತೆಯಿರುವುದಿಲ್ಲವೆಂದು,

**20.** ಅಲ್ಲದೇ ಆರೋಪಿತರು / ಅರ್ಜಿದಾರರರು ಅರ್ಜಿಯಲ್ಲಿ ತಿಳಿಸಿದ ವಿಳಾಸದಲ್ಲಿ ವಾಸವಾಗಿದ್ದು, ಕಾಲೇಜಿಗೆ ಹೋಗುತ್ತಿದ್ದು ತಲೆಮರೆಸಿಕೊಳ್ಳುವ ಸಾಧ್ಯತೆಯಿರುವುದಿಲ್ಲವೆಂದು ಮತ್ತು ನ್ಯಾಯಾಲಯವು ವಿಧಿಸುವ ಷರತ್ತುಗಳನ್ನು ಪಾಲಿಸಲು ಬದ್ಧರಿರುತ್ತಾರೆಂದು, ಆದ್ದರಿಂದ ಜಾಮೀನು ಅರ್ಜಿಯನ್ನು ಪುರಸ್ಕರಿಸಿ ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ವಾದ ಮಂಡಿಸಿ ತಮ್ಮ ವಾದ ಮಂಡನೆಯ ಸಮರ್ಥನೆಗಾಗಿ ಮೇಲ್ಕಂಡ ತೀರ್ಪಿನ ವರದಿಗಳನ್ನು ಹಾಜರುಪಡಿಸಿರುತ್ತಾರೆ.

**21.** ಇದಕ್ಕೆ ವ್ಯತಿರಿಕ್ತವಾಗಿ ಸರ್ಕಾರಿ ಅಭಿಯೋಜಕರು ವಾದ ಮಂಡಿಸಿ ಸದರಿ ಆರೋಪಿತರ ಬೇಡಿಕೆಯಂತೆ ಸುರೇಶನ ತಂದೆಯು ಪೋನ್ ಮೂಲಕ ಆರೋಪಿತರಿಗೆ ಮೂರು ಬಾರಿ ರೂ.20,000-00 ದಂತೆ ಮತ್ತು ಒಂದು ಬಾರಿ ರೂ.40,000-00 ಗಳಂತೆ ಒಟ್ಟು ರೂ.1,00,000-00 ಗಳನ್ನು ಫೋನ್‌ಪೇ ಮೂಲಕ ಪಾವತಿಸಿರುತ್ತಾರೆಂದು, ಸದರಿ ಸುರೇಶನ ತಂದೆಯು ರಾಜಸ್ಥಾನದಲ್ಲಿರುವುದರಿಂದ ಆತನ ಸ್ನೇಹಿತನಾದ ಪಿರ್ಯಾದಿದಾರನ ಮೂಲಕ ದೂರನ್ನು ದಾಖಲಿಸಿರುತ್ತಾರೆಂದು, ಅಲ್ಲದೇ ತನಿಖೆಯ ಸಮಯದಲ್ಲಿ ಆರೋಪಿತರನ್ನು ದಸ್ತಗಿರಿಪಡಿಸಿ ಸದರಿಯವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದರಿಂದ ಸ್ಥಳದಲ್ಲಿ ಮಹಜರು ಬರೆದು ಕೃತ್ಯಕ್ಕೆ ಉಪಯೋಗಿಸಿದ ವಾಹನಗಳನ್ನು, ದೊಣ್ಣೆಯನ್ನು ಮತ್ತು ಮೊಬೈಲ್‌ಗಳನ್ನು ಅಮಾನತ್ತುಪಡಿಸಿಕೊಂಡಿದ್ದು ಮೇಲ್ನೋಟಕ್ಕೆ ಆರೋಪಿತರು ಕೃತ್ಯ ಎಸಗಿರುತ್ತಾರೆಂಬುದು

ಕಂಡುಬರುತ್ತದೆಂದು ಆದ್ದರಿಂದ ಆರೋಪಿತರನ್ನು ಜಾಮೀನಿನ ಮೇಲೆ ಬಿಟ್ಟಲ್ಲಿ ಯಾವುದೇ ಭಯ-ಭೀತಿ ಇಲ್ಲದೇ ಪುನಃ ಇಂತಹ ಕೃತ್ಯಗಳನ್ನು ಮಾಡುವ ಅವಕಾಶ ಇರುತ್ತದೆಂದು, ಅಲ್ಲದೇ ಸಾಕ್ಷ್ಯವನ್ನು ನಾಶಪಡಿಸುವ ಮತ್ತು ಸಾಕ್ಷಿದಾರರನ್ನು ಹೆದರಿಸಿ, ಬೆದರಿಸುವ ಹಾಗೂ ತಲೆಮರೆಸಿಕೊಂಡು ತನಿಖೆಗೆ ತೊಂದರೆಯುಂಟುಪಡಿಸುವ ಸಾಧ್ಯತೆಯಿರುತ್ತದೆಂದು ಆದ್ದರಿಂದ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ವಾದ ಮಂಡಿಸಿರುತ್ತಾರೆ.

**22.** ಉಭಯ ವಕೀಲರ ವಾದ ವಿವಾದದೊಂದಿಗೆ ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿತರೆಲ್ಲರೂ ಅಪಹರಣಕ್ಕೆ ಒಳಪಟ್ಟ ಸುರೇಶನ ತಂದೆಯಿಂದ ಫೋನ್‌ಪೇ ಮೂಲಕ ಹಣ ಪಡೆದಿರುತ್ತಾರೆಂಬುದನ್ನು ಪರಿಶೀಲಿಸಿದಾಗ ಸದರಿ ಆರೋಪಿತರು ಹಣ ಪಡೆಯುವ ಉದ್ದೇಶದಿಂದ ಅಪಹರಿಸಿರುತ್ತಾರೆಂಬುದು ಕಂಡುಬರುತ್ತದೆ.

**23.** ಅಲ್ಲದೇ ಅರ್ಜಿದಾರರು ಅರ್ಜಿಯಲ್ಲಿ ತಿಳಿಸಿರುವಂತೆ ಸುರೇಶನು 1 ನೇ ಆರೋಪಿಯಿಂದ ರೂ50,000-00 ಗಳನ್ನು ಪಡೆದಿದ್ದಲ್ಲಿ ರೂ.1,50,000-00 ಗಳನ್ನು ಪಡೆಯುವ ಅವಶ್ಯಕತೆಯಿರುವುದಿಲ್ಲ. ಅಲ್ಲದೇ ಹಣಕಾಸಿನ ವ್ಯವಹಾರವಾಗಿದ್ದಲ್ಲಿ ಸಿವಿಲ್ ದಾವೆ ಸಲ್ಲಿಸುವ ಮೂಲಕ ವಸೂಲಾತಿ ಮಾಡಿಕೊಳ್ಳಲು ಅವಕಾಶವಿರುತ್ತದೆ. ಆದರೆ ಅಪಹರಿಸುವ ಮತ್ತು ಸದರಿ ಹಣಕ್ಕಾಗಿ ಆತನ ತಂದೆಗೆ ಫೋನ್ ಮಾಡಿ ಹೆದರಿಸುವ ಅವಶ್ಯಕತೆಯಿರುವುದಿಲ್ಲ.

**24.** ಒಂದು ವೇಳೆ ಸುರೇಶನು ಡ್ರಗ್ಸ್ ಮಾರಾಟ ಮಾಡುತ್ತಿದ್ದಲ್ಲಿ ಸದರಿ ವಿಚಾರವನ್ನು ಸಂಬಂಧಪಟ್ಟ ವಿಚಾರಣಾ ವ್ಯಾಪ್ತಿಯಲ್ಲಿರುವ ಪೋಲೀಸರಿಗೆ ತಿಳಿಸಬಹುದಾಗಿತ್ತು ಮತ್ತು ಆತನನ್ನು ಪೋಲೀಸರ ವಶಕ್ಕೆ ನೀಡಬಹುದಾಗಿತ್ತು. ಅವೆರಡನ್ನೂ ಮಾಡದೇ ಪೋಲೀಸ್ ನೈತಿಕಗಿರಿಯನ್ನು

ನಡೆಸಿ ತಾವೇ ಹಲ್ಲೆ ಮಾಡಿ ಅಪಹರಿಸಿ ಮತ್ತು ಹೆಚ್ಚಿನ ಹಣವನ್ನು ಸುಲಿಗೆ ಮಾಡುವ ಉದ್ದೇಶ ದಿಂದ ಕೂಡಿಹಾಕಿ, ಹಲ್ಲೆ ನೀಡಿ ಹಿಂಸೆ ಮಾಡಿರುತ್ತಾರೆಂಬುದು ನ್ಯಾಯಾಲಯದ ಮುಂದಿರುವ ದಾಖಲೆಗಳ ಮೂಲಕ ಕಂಡುಬರುತ್ತದೆ.

**25.** ಅಲ್ಲದೇ ಸದರಿ ಆರೋಪಿತರು ನಿಟ್ಟೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು ವಿದಾರ್ಥಿಗಳಾಗಿರುತ್ತಾರೆಂದು ಮತ್ತ 20 ರಿಂದ 22 ರ ವಯಸ್ಸರಾಗಿರುತ್ತಾರೆಂದು ತಿಳಿಸಿದ್ದು ಈ ವಯಸ್ಸಿನಲ್ಲಿ ಓದದೇ ಹೊರ ರಾಜ್ಯದಿಂದ ದುಡಿಯಲು ಮತ್ತು ಜೀವಿಸಲು ಬಂದಂತಹ ಅಪರಿಚಿತರಿಗೆ ಹೆದರಿಸಿ ಬೆದರಿಸಿ ಹಣ ಸುಲಿಗೆ ಮಾಡುವ ಆರೋಪಿತರನ್ನು ವಿದ್ಯಾರ್ಥಿಗಳೆಂದು ಮತ್ತು ಪ್ರಾಯಸ್ಥರಾಗಿರುತ್ತಾರೆಂದು ಪರಿಗಣಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಲು ಯಾವುದೇ ಸಮರ್ಥನೀಯವಾದ ಕಾರಣಗಳಿರುವುದಿಲ್ಲ.

**26.** ವಿಚಾರಣೆಯ ಪೂರ್ವದಲ್ಲಿಯೇ ಆರೋಪಿತರನ್ನು ನ್ಯಾಯಾಂಗ ಬಂಧನದಲ್ಲಿ ಮುಂದುವೆಸಿದ್ದಲ್ಲಿ ನಿರ್ಣಯದ ಪೂರ್ವದಲ್ಲಿಯೇ ಶಿಕ್ಷೆ ನೀಡಿದಂತಾಗುತ್ತದೆಂಬುದು ಮತ್ತು ಆರೋಪತರ ವಯಕ್ತಿಕ ಸ್ವಾತಂತ್ರಕ್ಕೆ ಧಕ್ಕೆಯನ್ನುಂಟು ಮಾಡಿದಂತಾಗುತ್ತದೆಂಬುದು ಕಂಡು ಬಂ ದಿದ್ದರಿಾ ಸಹ ಆದರೆ ಸದರಿ ಆರೋಪಿತರು ಹೊರ ರಾಜ್ಯಗಳಿಂದ ದುಡಿದು ಜೀವಿಸಲು ಬಂದಂತಹ ಜನ ಸಾಮಾನ್ಯರಿಗೆ ಶಾಂತಿಯುತವಾದ ಜೀವನವನ್ನು ಸಾಗಿಸಲು ಮತ್ತು ಸಂವಿಧಾನ ಬದ್ಧವಾದ ವಯಕ್ತಿಕ ಗುರುತನ್ನು ಮತ್ತು ಜೀವಿಸುವ ಹಕ್ಕನ್ನು ಸದರಿ ಆರೋಪಿತರು ನಾಶಪಡಿಸಲು ಮತ್ತು ಧಕ್ಕೆ ಪಡಿಸಲು ಪ್ರಯತ್ನಿಸಿರುತ್ತಾರೆಂಬುದು ಮತ್ತು ಪುಡಿರೌಡಿಗಳಂತೆ ವರ್ತಿಸಿ ಸ್ಥಳೀಯ ಪ್ರದೇಶದಲ್ಲಿ ಸಮಾಜ ಮತ್ತು ಜನಸಾಮಾನ್ಯರಲ್ಲಿ ಭಯ ಭೀತಿಯನ್ನುಂಟು ಮಾಡಲು ಪ್ರಯತ್ನಿಸಿರುತ್ತಾರೆಂಬುದು ಕಂಡುಬರುತ್ತದೆ.

**27.** ಅಲ್ಲದೇ ಸದರಿ ಪ್ರಕರಣದಲ್ಲಿ ವಿಚಾರಣೆ ಪ್ರಾರಂಭವಾಗದೇ ಇದ್ದುದ್ದರಿಂದ ಸದರಿ ಅಂಶಗಳನ್ನು ಪರಿಗಣಿಸಿದಾಗ ಸದರಿ ಆರೋಪಿತರೆಲ್ಲರೂ ಸಮಾನ ಉದ್ದೇಶದಿಂದ ಪೂರ್ವಭಾವಿಯಾಗಿ ಯೋಜಿಸಿಯೇ ಸದರಿ ಕೃತ್ಯವನ್ನು ಮಾಡಿರುತ್ತಾರೆಂಬುದು ಅಲ್ಲದೇ ಹಣಕ್ಕಾಗಿ ಸುರೇಶನ ತಂದೆಗೆ ಹೆದರಿಸಿ ಬೆದರಿಸಿತ್ತಾರೆಂಬುದು ನ್ಯಾಯಾಲಯದ ಮುಂದಿರುವ ದಾಖಲೆಗಳ ಮೂಲಕ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ ಒಂದು ವೇಳೆ ಆರೋಪಿತರನ್ನು ಜಾಮೀನಿನ ಮೇಲೆ ಬಿಟ್ಟಲ್ಲಿ ತಲೆಮರೆಸಿಕೊಳ್ಳುವ ಸಾಧ್ಯತೆಯಿರುತ್ತದೆ, ಇದರಿಂದ ವಿಚಾರಣೆಗೆ ಅಡ್ಡಿಯುಂಟಾಗುವ ಮತ್ತು ವಿಳಂಭವಾಗುವ ಸಂಭವವಿರುತ್ತದೆ.

**28.** ಅಲ್ಲದೇ, ಪಿರ್ಯಾದಿದಾರರನ್ನು ಮತ್ತು ಸಾಕ್ಷಿದಾರರನ್ನು ಹೆದರಿಸುವ ಮತ್ತು ಬೆದರಿಸುವ ಮತ್ತು ಸಾಕ್ಷ್ಯವನ್ನು ನಾಶಪಡಿಸುವ ಸಂಭವವಿರುತ್ತದೆಂಬುದು ಕಂಡು ಬರುತ್ತದೆ, ಅದ್ದರಿಂದ ಸದರಿ ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲು ಯಾವುದೇ ಸಮರ್ಥನೀಯವಾದ ಕಾರಣಗಳಿರುವುದಿಲ್ಲವೆಂಬುದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಆದ್ದರಿಂದ ಸದರಿ ಅರ್ಜಿದಾರರ ವಕೀಲರು ತಮ್ಮ ವಾದಮಂಡನೆಯಲ್ಲಿ ಸಲ್ಲಿಸಿದ ತೀರ್ಪಿನ ವರದಿಗಳಲ್ಲಿನ ಅಂಶಗಳನ್ನು ಗೌರವಯುತವಾಗಿ ಅಂಗೀಕರಿಸಲ್ಪಟ್ಟರೂ ಸಹ ಸದರಿ ಆರೋಪಿತರು ದಿನಾಂಕಃ 30-06-2023 ರಿಂದ ನ್ಯಾಯಾಂಗ ಬಂಧನದಲ್ಲಿರುತ್ತಾರೆಂದ ಮಾತ್ರಕ್ಕೆ ಮತ್ತು ಗಾಯದ ಪ್ರಮಾಣಪತ್ರದಲ್ಲಿ ಸಾದಾ ಸ್ವರೂಪದ ಗಾಯಗಳಾಗಿರುತ್ತವೆಂದು ತಿಳಿಸಿದ ಮಾತ್ರಕ್ಕೆ ಹಾಗೂ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಪತ್ರವನ್ನು ಸಲ್ಲಿಸಿರುತ್ತಾರೆಂದ ಮಾತ್ರಕ್ಕೆ ಆರೋಪಿತರನ್ನು ಜಾಮೀನಿನ ಮೆಲೆ ಬಿಡುಗಡೆಗೊಳಿಸಲು ಯಾವುದೇ ಸಮರ್ಥನೆಯನ್ನು ನೀಡುವು

ದಿಲ್ಲ. ಆದ್ದರಿಂದ, ಸದರಿ ಅಂಶಗಳನ್ನು ಗಮನಿಸಿ **1 ನೇ ಅಂಶವನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.**

**29. ಅಂಶ 2:** 1ನೇ ಅಂಶದಲ್ಲಿ ತಿಳಿಸಿದ ಕಾರಣದ ಮೇರೆಗೆ ಈ ಕೆಳಕಂಡಂತೆ

**ಆದೇಶ**

ಸದರಿ 2 ರಿಂದ 4 ನೇ ಆರೋಪಿತರು / ಅರ್ಜಿದಾರರು ದಂಡಪ್ರಕ್ರಿಯಾ ಸಂಹಿತೆ ಕಲಂ 439 ರಡಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ತಿರಸ್ಕರಿಸಲಾಗಿದೆ.

(ಸದರಿ ಆದೇಶವನ್ನು ನೇರವಾಗಿ ಶೀಘ್ರಲಿಪಿಗಾರರಿಗೆ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ ಓದಿ, ತಿದ್ದುಪಡಿಸಿ ಈ ದಿನ ದಿನಾಂಕಃ **14 ನೇ ಆಗಸ್ಟ್ 2022** ರಂದು ಆದೇಶ ನೀಡಲಾಯಿತು.)

**(ರಮೇಶ ದುರುಗಪ್ಪ ಏಕಬೋಟೆ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.